ಮೂರನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ,
ದಕ್ಷಿಣ ಕನ್ನಡ, ಮಂಗಳೂರು.

# ಸೆಷನ್ಸ್ ಕೇಸ್ ನಂಬ್ರ 5/2024

| | | | |
|---|---|---|---|
| ಸಾಕ್ಷಿದಾರರ ಹೆಸರು | : | ಶ್ರೀ ರಿಯಾಜ್ | ಪ್ರಾಸಾಃ 3 |
| ತಂದೆಯ ಹೆಸರು | : | ಹಮೀದ್ | ಚಾಸಾಃ 4 |
| ಪ್ರಾಯ | : | 45 ವರ್ಷ | **ದಿನಾಂಕಃ 27.06.2024** ರಂದು ಸಾಕ್ಷಿದಾರರಿಗೆ ಪ್ರಮಾಣವಚನ ಬೋಧಿಸಲಾಯಿತು. |
| ಉದ್ಯೋಗ | : | ಕೂಲಿ ಕೆಲಸ | |
| ವಾಸಸ್ಥಳ | : | ಲಿಂಗಪ್ಪಯ್ಯಕಾಡು, ಮುಲ್ಕಿ ತಾಲೂಕು. | |

**ಮುಖ್ಯ ವಿಚಾರಣೆಃ ಮಾನ್ಯ ಸರಕಾರಿ ಅಭಿಯೋಜಕರಿಂದಃ**

ನನ್ನ ಬಳಿ ಕೈನೆಟಿಕ್ ಹೋಂಡಾ ದ್ವಿಚಕ್ರ ವಾಹನ ಇದೆ. ದಿನಾಂಕಃ 17.09.2023 ರಂದು ಮಧ್ಯಾಹ್ನ 12.30 ಗಂಟೆ ಸಮಯಕ್ಕೆ ಬೆಳ್ಳಾಯಿನಲ್ಲಿರುವ ನಮ್ಮ ನೆಂಟರ ಮನೆಗೆ ನಾನು ನನ್ನ ದ್ವಿಚಕ್ರ ವಾಹನದಲ್ಲಿ ಹೋಗುತ್ತಿದ್ದೆ. ಆ ಸಮಯ ಚಂದ್ರಮೌಳೀಶ್ವರ ದೇವಸ್ಥಾನದ ಬಳಿ, ವಸಂತಿ ಶೆಟ್ಟಿ ಎನ್ನುವವರ ಮನೆ ಪಕ್ಕದಲ್ಲಿ ಐದು ಜನ ಆ ಕಡೆ ಈ ಕಡೆ ತಿರುಗಾಡುತ್ತಿದ್ದರು, ಅವರಲ್ಲಿ ಒಬ್ಬ ಬೈಕ್ ಮೇಲೆ ಇದ್ದ. ಅವರನ್ನು ನೋಡಿ ನಾನು ಏನೋ ಕೆಲಸದ ಮೇಲೆ ಇದ್ದಾರೆ ಅಂತ ತಿಳಿದು ನನ್ನ ಸಂಬಂಧಿಕರ ಮನೆಗೆ ಹೋದೆ.

2. ಸಂಜೆ ಮರಳಿ 4.30 ಗಂಟೆ ಸುಮಾರಿಗೆ ನಾನು ಬಂದೆ, ನಂತರ 6.00 ಗಂಟೆಗೆ ನನಗೆ ವಸಂತಿ ಶೆಟ್ಟಿಯವರ ಮನೆಯಲ್ಲಿ ದರೋಡೆಯಾಗಿರುವ ವಿಷಯ ಮತ್ತು ಆಕೆಯ ಕರಿಮಣಿಯನ್ನು ತೆಗೆದುಕೊಂಡು ಹೋಗಿರುವ ವಿಷಯ ಗೊತ್ತಾಯಿತು. ಮಾರನೇ ದಿನ ದಿನಾಂಕಃ 18.09.2023 ರಂದು ನಾನು ಪೊಲೀಸು ಠಾಣೆಗೆ ಹೋಗಿ ಐದು ಜನ ಅಪರಿಚಿತರು ಸ್ಥಳದಲ್ಲಿ ಇದ್ದ ಬಗ್ಗೆ ಹೇಳಿರುತ್ತೇನೆ.

3. ನಂತರ ದಿನಾಂಕಃ 30.09.2023 ರಂದು ಪೊಲೀಸರು ನನ್ನನ್ನು ಕರೆಯಿಸಿ, ಒಬ್ಬರನ್ನು ಬಂಧಿಸಿದ್ದೇವೆ, ನೀವು ಗುರುತು ಹಚ್ಚಲು ಆಗುತ್ತದೆಯೇ ಎಂದು ಕೇಳಿರುತ್ತಾರೆ. ಅದಕ್ಕೆ ನಾನು ಅವರನ್ನು ನೋಡಿ ಗುರುತು ಹಚ್ಚಿರುತ್ತೇನೆ. ನಂತರ ದಿನಾಂಕಃ 03.10.2023 ರಂದು ಪುನಃ ನನ್ನನ್ನು ಠಾಣೆಗೆ ಕರೆಯಿಸಿ, ಮೂರು ಜನರನ್ನು ಬಂಧಿಸಿದ್ದು, ಅವರನ್ನು ಗುರುತು ಹಚ್ಚಲು ಆಗುತ್ತದೆಯೇ ಎಂದು ಕೇಳಿರುತ್ತಾರೆ. ಅದಕ್ಕೆ ನಾನು ಅವರನ್ನು ಸಹ ಗುರುತು ಹಚ್ಚಿರುತ್ತೇನೆ. ಈ ಬಗ್ಗೆ ನಾನು ಪೊಲೀಸರಿಗೆ ಹೇಳಿಕೆ ಮತ್ತು ಮರುಹೇಳಿಕೆ ಕೊಟ್ಟಿರುತ್ತೇನೆ.

4. ಈ ದಿನ ನ್ಯಾಯಾಲಯದ ಮುಂದೆ ಹಾಜರಿರುವ 4 ಜನ ಆರೋಪಿತರನ್ನು ಹಾಗೂ ವಿ.ಸಿ. ಮೂಲಕ ಹಾಜರಿರುವ ಇನ್ನೊಬ್ಬ ಆರೋಪಿಯನ್ನು ಸಾಕ್ಷಿ ನೋಡಿ ಗುರುತಿಸುತ್ತಾರೆ.

**<u>ಪಾಟೀ ಸವಾಲುಃ 3 ಮತ್ತು 5 ನೇ ಆರೋಪಿ ಪರ ಶ್ರೀ ವಿ.ಆರ್.ಎ. ವಕೀಲರಿಂದಃ</u>**

5. ನಾನು ಕೂಲಿ ಕೆಲಸವನ್ನು ಎಲ್ಲೆಲ್ಲಿ ಕೆಲಸ ಬರುತ್ತದೆ, ಅಲ್ಲಿಗೆ ಹೋಗಿ ಮಾಡುತ್ತೇನೆ. ಹೆಚ್ಚಾಗಿ ಮುಲ್ಕಿಯಲ್ಲೇ ನಾನು ಕೂಲಿ ಕೆಲಸ ಮಾಡುತ್ತೇನೆ. ನಾನು ಲಿಂಗಪ್ಪಯ್ಯಕಾಡು ಊರಿನವನು ಆಗಿರುತ್ತೇನೆ. ಸದರಿ ಸ್ಥಳಕ್ಕೆ ಉತ್ತರ ಕರ್ನಾಟಕದಿಂದ ಬಹಳಷ್ಟು ಜನ ಕೆಲಸಕ್ಕಾಗಿ ಬರುತ್ತಾರೆ ಮತ್ತು ಆ ರೀತಿ ಹೊಸಬರು ಮುಲ್ಕಿಗೆ ಕೆಲಸಕ್ಕಾಗಿ ಬರುವುದು ಸಾಮಾನ್ಯ ಎಂದರೆ ಸರಿ. ನಾನು ಕೆಲಸಕ್ಕೆ ಹೋಗುವಾಗ ನನ್ನ ದ್ವಿಚಕ್ರ ವಾಹನ ಬಳಸುತ್ತೇನೆ. ಆ ರೀತಿ ದಿನಾ ಕೆಲಸಕ್ಕೆ ಹೋಗುವಾಗ ನನಗೆ ಪರಿಚಯ ಇಲ್ಲದ

ಹೊಸಬರನ್ನು ಸುಮಾರು 15 ಜನರನ್ನು ನೋಡುತ್ತೇನೆ ಎಂದರೆ ಸರಿ. ಆ ರೀತಿ ಹೊಸದಾಗಿ ನೋಡಿದವರನ್ನು ಪರಿಚಯ ಇಟ್ಟುಕೊಳ್ಳಲು ಆಗುವುದಿಲ್ಲ ಎಂದರೆ ಸರಿ.

6. ಚಂದ್ರಮೌಳೀಶ್ವರ ದೇವಸ್ಥಾನದ ಹತ್ತಿರದ ರಸ್ತೆ ನೇರವಾದ ರಸ್ತೆ ಎಂದರೆ ಸರಿ. ನಾನು ಸಾಮಾನ್ಯವಾಗಿ 40-50 ಕಿ.ಮೀ. ವೇಗದಲ್ಲಿ ದ್ವಿಚಕ್ರ ವಾಹನ ಓಡಿಸುತ್ತೇನೆ. ಸದರಿ ರಸ್ತೆಯಲ್ಲಿ ದಿನಾಲು ತುಂಬಾ ಜನ ಅಪರಿಚಿತರು ಸಿಗುತ್ತಾರೆ ಎಂದರೆ ಸರಿ. ಆ ದಿನ ನಾನು ನನ್ನ ಮನೆಯಿಂದ ಹೊರಟು ನನ್ನ ಸಂಬಂಧಿಕರ ಮನೆಯಲ್ಲೇ ಗಾಡಿ ನಿಲ್ಲಿಸಿರುತ್ತೇನೆ, ಮಧ್ಯದಲ್ಲಿ ಎಲ್ಲಿಯೂ ಗಾಡಿ ನಿಲ್ಲಿಸಿಲ್ಲ.

7. ವಸಂತಿ ಶೆಟ್ಟಿಯವರ ಪರಿಚಯ ನನಗೆ ಮೊದಲಿನಿಂದಲೂ ಇದೆ. ಸಾಮಾನ್ಯವಾಗಿ ಯಾರನ್ನಾದರೂ ನೋಡಿದರೆ ಅವರ ಎತ್ತರ ಮತ್ತು ಮುಖ ಲಕ್ಷಣ ನೋಡಿ ನೆನಪಿಟ್ಟುಕೊಳ್ಳುತ್ತೇವೆ. ಪೊಲೀಸರಿಗೆ ಹೇಳಿಕೆ ಕೊಡುವ ಕಾಲಕ್ಕೆ ಯಾವ ತರಹದ ವ್ಯಕ್ತಿಯನ್ನು ನೋಡಿದ್ದೇನೆ ಅಂತ ನನ್ನ ಹೇಳಿಕೆಯಲ್ಲಿ ಹೇಳಿಲ್ಲ ಎಂದರೆ ಸರಿ. ಸದರಿ ವ್ಯಕ್ತಿಗಳನ್ನು ನಾನು ಸುಮಾರು 20 ಅಡಿ ದೂರದಿಂದ ನೋಡಿದ್ದೇನೆ, ಆಗ ವಾಹನ ಚಾಲ್ತಿಯಲ್ಲಿತ್ತು, ಅಂದರೆ 2-3 ಸೆಕೆಂಡು ಅವಧಿಯಲ್ಲಿ ನೋಡಿದ್ದೇನೆ. ಆ ರೀತಿ ನೋಡಿದ ವ್ಯಕ್ತಿಗಳನ್ನು ನಾನು ನೆನಪಿಟ್ಟುಕೊಳ್ಳದ ಕಾರಣ, ಅವರ ಚಹರೆಯನ್ನು ಹೇಳಿಕೆ ಕೊಡುವ ಕಾಲಕ್ಕೆ ಹೇಳಿಲ್ಲ ಎಂದರೆ ಸರಿ.

8. ಪೊಲೀಸರು ನನಗೆ ದೂರವಾಣಿ ಕರೆ ಮಾಡಿ ಕರೆಸಿರುತ್ತಾರೆ. ಪೊಲೀಸರು ಆ ರೀತಿ ಕರೆ ಮಾಡಿ "ನಾವು ಯಾರನ್ನೋ ಬಂಧಿಸಿದ್ದೇವೆ, ಅವರನ್ನು ಗುರುತಿಸಬಹುದೇ" ಎಂದು ಹೇಳಿ ಕರೆದಿರುತ್ತಾರೆ. ಪೊಲೀಸು ಠಾಣೆಗೆ ಹೋದಾಗ ವ್ಯಕ್ತಿಗಳ ಮುಖಕ್ಕೆ

ಮುಸುಕು ಹಾಕಿದ್ದರು, ನಂತರ ಕಂಪ್ಯೂಟರಿನಲ್ಲಿ ಫೋಟೋಗಳನ್ನು ತೋರಿಸಿದ್ದಾರೆ. ಕಂಪ್ಯೂಟರಿನಲ್ಲಿ ಈಗ ಸಮನ್ಸ್ ಬಂದ ನಂತರ 2-3 ದಿನದ ಹಿಂದೆ ಫೋಟೋಗಳನ್ನು ನೋಡಿರುತ್ತೇನೆ. ಪೊಲೀಸರು ಫೋಟೋ ತೋರಿಸಿದ ಕಾರಣ ಈ ದಿನ ನ್ಯಾಯಾಲಯದ ಮುಂದೆ ಇರುವ ಆರೋಪಿಗಳನ್ನು ಗುರುತಿಸಿದ್ದೇನೆ ಎಂದರೆ ಸರಿಯಲ್ಲ.

9. ನಾನು ಹೇಳಿದ ರೀತಿ ಯಾವುದೇ ವ್ಯಕ್ತಿಗಳನ್ನು ನಾನು ನೋಡಿಲ್ಲ ಮತ್ತು ಈ ದಿನ ನ್ಯಾಯಾಲಯದ ಮುಂದೆ ಮತ್ತು ವಿ.ಸಿ. ಮುಖಾಂತರ ಹಾಜರಿರುವ ಆರೋಪಿಗಳನ್ನು ನಾನು ಇದೇ ಪ್ರಥಮ ಬಾರಿಗೆ ನೋಡುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ 1, 2 ಮತ್ತು 6 ನೇ ಆರೋಪಿತರ ಪರ ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರದ ಶ್ರೀ ಜಿ.ವಿ.ಜಿ. ವಕೀಲರಿಂದಃ**

(ಉಳಿದ ಆರೋಪಿತರ ಪರ ವಕೀಲರು ಮಾಡಿದ ಪಾಟೀ ಸವಾಲನ್ನೇ ಅಳವಡಿಸಿಕೊಳ್ಳುವುದಾಗಿ ನುಡಿಯುತ್ತಾರೆ.)

**ಮರುವಿಚಾರಣೆಃ ಇಲ್ಲ.**

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓದಿ ಹೇಳಿ ಕೇಳಿ ಸರಿ ಇದೆ.

ಮೂರನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ದ.ಕ., ಮಂಗಳೂರು.